**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**
**ಸಿ.ಸಿ. ಸಂಖ್ಯೆ: 2149/2023**

**ಸಿ.ಡಬ್ಲೂ.:6 /ಪಿ.ಡಬ್ಲೂಃ 5**

**ಪ್ರಮಾಣೀಕರಿಸಿದ ದಿನಾಂಕಃ 24-06-2026**

| | |
|---|---|
| **ಹೆಸರು** | ಅರುಣ್ ಕುಮಾರ್ |
| **ತಂದೆಯ ಹೆಸರು** | ವೆಂಕಟಾಚಲಯ್ಯ |
| **ವಯಸ್ಸು** | 40 ವರ್ಷ |
| **ವೃತ್ತಿ** | ಅಬಕಾರಿ ನಿರೀಕ್ಷಕರು, ಬಂಗಾರಪೇಟೆ |
| **ವಾಸ** | ಬಂಗಾರಪೇಟೆ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

1. ನಾನು ನವೆಂಬರ್ 2022 ನೇ ಸಾಲಿನಿಂದ ಇಲ್ಲಿಯವರೆಗೆ ಬಂಗಾರಪೇಟೆ ವಲಯದಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ03.05.2023 ರಂದು ವಿದಾನಸಭಾ ಚುನಾವಣಾ ಪ್ರಯುಕ್ತ ಕ್ಯಾಸಂಬಹಳ್ಳಿ ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ ನಮಗೆ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಬಂದಿದ್ದು ಅದರಂತೆ ಚಾಸಾ1 ರವರನ್ನು ಪಂಚರಾಗಲು ಕೋರಿಕೊಂಡು ಕ್ಯಾಸಂಬಹಳ್ಳಿ ರಸ್ತೆ ಇಂದ ಶಾಂತಿಪುರಂ ಮುಖ್ಯ ರಸ್ತೆಯಲ್ಲಿ ನಾನು ಮತ್ತು ನನ್ನ ಇತರ ಸಿಬ್ಬಂದಿಗಳು ಪಂಚರೊಂದಿಗೆ ಗಸ್ತು ಮಾಡುತ್ತಿದ್ದೆವು. ಆ ಸಮಯದಲ್ಲಿ ಒಂದು ದ್ವಿಚಕ್ರ ವಾಹನದಲ್ಲಿ ಒಬ್ಬ ಆಸಾಮಿಯು ಬರುತ್ತಿದ್ದು ಆತನಲ್ಲಿ ಒಂದು ನೀಲಿ ಬಣ್ಣದ ಮೂಟೆ ಇದ್ದು ಅದನ್ನು ಕಂಡು ನಾವು ಆತನನ್ನು ತಡೆದು ನಿಲ್ಲಿಸಿರುತ್ತೇವೆ. ನಂತರ ಆತನ ಹೆಸರು, ವಿಳಾಸ ಕೇಳಲಾಗಿ ತನ್ನ ಹೆಸರು ಹರೀಶ್ ಬಿನ್ ಕೃಷ್ಣಪ್ಪ ಎಂದು ಹೇಳಿರುತ್ತಾರೆ.

3. ನಂತರ ಸದರಿ ಮೂಟೆಯನ್ನು ಪರಿಶೀಲಿಸುವ ಸಲುವಾಗಿ ಅಲ್ಲಿಯೇ ಶೋದನಾ ವಾರೆಂಟನ್ನು ತಯಾರಿಸಿ ಈ ವಿಚಾರವನ್ನು ಆರೋಪಿಗೆ ತಿಳಿಸಿ ಪಂಚರ ಸಮಕ್ಷಮ ಸದರಿ ನೀಲಿ ಬಣ್ಣದ ಮೂಟೆಯನ್ನು ಪರಿಶೀಲಿಸಿರುತ್ತೇವೆ. ಸದರಿ ಮೂಟೆಯನ್ನು ತೆರೆದು ನೋಡಲಾಗಿ ಅದರಲ್ಲಿ 90 ಮಿಲಿಯ 240 ಹೈವಾರ್ಡ್ಸ್ ವಿಸ್ಕಿ ಟೆಟ್ರಾ ಪಾಕೇಟುಗಳು ಇದ್ದವು. ಆ ಸಮಯದಲ್ಲಿ ಸದರಿ ಮದ್ಯದ ಸಾಗಾಣಿಕೆಗೆ ಪರವಾನಗಿ ಇದೆಯಾ ಎಂದು ಕೇಳಲಾಗಿ ಆರೋಪಿಯು ಇಲ್ಲ ಎಂದು ತಿಳಿಸಿದ್ದು ನಂತರ ನಾವು ಸದರಿ ಮದ್ಯಗಳ ಪೈಕಿ 30 ಮದ್ಯದ ಟೆಟ್ರಾ ಪಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ, ಬಿಳಿ ಬಟ್ಟೆ ಇಂದ ಸುತ್ತಿ ಸೀಲು ಮಾಡಿರುತ್ತೇವೆ.

4. ನಂತರ ಆರೋಪಿಯು ಸದರಿ ಮದ್ಯಗಳನ್ನು ಸಾಗಾಣಿಕೆ ಮಾಡಲು ಉಪಯೋಗಿಸಿದ ದ್ವಿಚಕ್ರ ವಾಹನ ಸಂಖ್ಯೆ ಎಪಿ 03 ಎವೈ 4586 ಎಂಬ ವಾಹನವನ್ನು ಸಹ ಅಮಾನತುಪಡಿಸಿಕೊಂಡಿದ್ದು ಸದರಿ ಪ್ರಕ್ರಿಯೆಗಳನ್ನು ಸಂಜೆ 5.30 ರಿಂದ 6.30 ರವರೆಗೆ

ಮಹಜರು ಮಾಡಿರುತ್ತೇವೆ. ನಂತರ ನಾವೆಲ್ಲರೂ ಸದರಿ ಮದ್ಯಗಳನ್ನು, ಆರೋಪಿಯನ್ನು, ವಾಹನವನ್ನು ತೆಗೆದುಕೊಂಡು ಠಾಣೆಗೆ ಹಿಂತಿರುಗಿರುತ್ತೇವೆ. ನಂತರ ನಾನು ಈ ಪ್ರಕರಣಕ್ಕೆ ಸಂಬಂದ ಪಟ್ಟಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾದಿಕಾರಿಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ7 ರವರಿಗೆ ಹಸ್ತಾಂತರಿಸಿರುತ್ತೇನೆ. ಆ ದಿನ ನಾವು ಹಿಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಅವರೇ ಆಗಿರುತ್ತಾರೆ.

5. ಆ ದಿನ ರಾಸಾವಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿದ 30 ಟೆಟ್ರಾ ಪಾಕೇಟುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಟೆಟ್ರಾ ಪಾಕೇಟುಗಳು ಅವೇ ಆಗಿದ್ದು ಅವುಗಳನ್ನು ಈಗಾಗಲೇ ಎಂ ಒ 1 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆ ಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.1 ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ2 ರಿಂದ 4 ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ನಿಪಿ2 ದಾಖಲೆಯು ಶೋದನಾ ಸಮುಚ್ಚಿತ ಆದಾರವಾಗಿದ್ದು ನಿಪಿ3 ವಶಪಡಿಸಿಕೊಂಡ ವಸ್ತುಗಳ ಪಟ್ಟಿ ಆಗಿದ್ದು ನಿಪಿ4 ಮಾದರಿ ಸೀಲಿನ ನಕಲು ಆಗಿದ್ದು ಸಾಕ್ಷಿಯ ಸಹಿಗಳನ್ನು ಈಗ ನಿಪಿ2 ಸಿ, 3 ಸಿ ಮತ್ತು 4 ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಸ್ವಯಂ ದೂರು ಆಗಿದ್ದು ಅದನ್ನು ಈಗ ನಿಪಿ10 ಎಂದು ಸಾಕ್ಷಿಯ ಸಹಿಯನ್ನು ನಿಪಿ10 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ತಾನು ದಾಖಲಿಸಿದ ಪ್ರಥಮ ವರ್ತಮಾನ ವರದಿ ಎಂದು ಗುರುತಿಸಿದ್ದು ಅದನ್ನು ಈಗ ನಿಪಿ11 ಎಂದು ಸಾಕ್ಷಿಯ ಸಹಿಯನ್ನು ನಿಪಿ11 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-ಆರೋಪಿ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ-**

6. ನನ್ನ ಪ್ರಕಾರ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಿದಾನ ಸಭಾ ಚುನಾವಣೆ ಪ್ರಯುಕ್ತ ಗಸ್ತುವಿಗೆ ಇರುವ ವಿಚಾಾವನ್ನು ನಮ್ಮ ಠಾಣಾ ವಹಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ವಹಿಯ ಪ್ರತಿಯನ್ನು ಚಾಸಾ7 ರವರಿಗೆ ಹಸ್ತಾಂತರಿಸಿರುತ್ತೇನೆ. ಆ ದಿನ ನನಗೆ ಸಂಜೆ 4.30 ಗಂಟೆಗೆ ಮಾಹಿತಿ ಬಂದಿದ್ದು ಆಗ ನಾನು ಕ್ಯಾಸಂಬಹಳ್ಳಿಯಲ್ಲಿ ಇದ್ದೆನು. ಸದರಿ ಸಮಯದ ಬಗ್ಗೆ ನಿಪಿ10 ಸ್ವಯಂ ದೂರಿನಲ್ಲಿ ನಮೂದು ಮಾಡಿದ್ದೇನಾ ಎಂದರೆ ಇಲ್ಲ. ನನ್ನ ಪ್ರಕಾರ ಚಾಸಾ1 ರವರು ಆ ದಿನ ಕ್ಯಾಸಂಬಹಳ್ಳಿಯಲ್ಲಿ ಇದ್ದರು. ಆ ದಿನ ಚಾಸಾ1 ರವರಿಗೆ ಮೌಖಿಕವಾಗಿ ಪಂಚರಾಗಲು ಕೋರಿಕೊಂಡಿದ್ದು ಲಿಖಿತ ನೋಟೀಸು ನೀಡಿರುವುದಿಲ್ಲ. ಸದರಿ ವಿಚಾರವನ್ನು ನಿಪಿ10 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ1 ಮಹಜರಿನಲ್ಲಿ ನಮೂದು ಮಾಡಿರುತ್ತೇನೆ ಎನ್ನುತ್ತಾರೆ.

7. ಸದರಿ ನನ್ನ ಪ್ರಕಾರ ಮಾಹಿತಿಯು ಸಂಜೆ 4.30 ಕ್ಕೆ ಬಂದ ನಂತರ ನಾವು 5 ಗಂಟೆಗೆ ಕ್ಯಾಳಹಂಬಹಳ್ಳಿ ಇಂದ ಹೊರಟಿರುತ್ತೇವೆ. ಸದರಿ ಕ್ಯಾಸಂಬಹಳ್ಳಿ ಇಂದ ಘಟನಾ ಸ್ಥಳಕ್ಕೆ 1 ಕಿ ಮೀ ಅಂತರ ಇರುತ್ತದೆ. ನನ್ನ ಪ್ರಕಾರ ಸದರಿ ಸ್ಥಳಕ್ಕೆ 5 ನಿಮಿಷದಲ್ಲಿ ತಲುಪಬಹುದು ಎಂದರೆ ಸರಿ. ಆ ಸಮಯದಲ್ಲಿ ಮಾಹಿತಿಯ ಪ್ರಕಾರ ಆರೋಪಿಯು ಸಂಜೆ 5 ರಿಂದ 6 ಗಂಟೆ ಒಳಗಡೆ ಬರುತ್ತಾರೆ ಎಂದು ಇದ್ದು ಅದರಂತೆ ನಾವು 5 ಗಂಟೆಗೆ ಅಲ್ಲಿಂದ ಹೊರಟಿರುತ್ತೇವೆ. ಸದರಿ ವಿಚಾರವನ್ನು ನಿಪಿ1 ಮತ್ತು 10 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ಪ್ರಕಾರ ನಾವು ಕ್ಯಾಸಂಬಹಳ್ಳಿಯನ್ನು 5.00 ಗಂಟೆಗೆ ಬಿಟ್ಟು 05.05 ಕ್ಕೆ ಸಲ್ಲಿ ತಲುಪಿರುತ್ತೇವೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಎಲ್ಲಾ ದಾಖಲೆಗಳಲ್ಲಿ ಸಮಯ ಸಂಜೆ 5.30 ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನಾವು 5.05 ರಿಂದ 5.30 ರ ತನಕ ಗಸ್ತುವಿನಲ್ಲಿದ್ದು 5.30 ಕ್ಕೆ ಆರೋಪಿಯು ಸ್ಥಳಕ್ಕೆ ಬಂದಿರುತ್ತಾರೆ ಎನ್ನುತ್ತಾರೆ. ಸದರಿ ವಿಚಾರವನ್ನು ನನ್ನ ಮಹಜರಿನಲ್ಲಿ ಮತ್ತು ನಿಪಿ10 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

8. ಸದರಿ ಮೇಲೆ ಹೇಳಿದ ವಿಚಾರವನ್ನು ನಿಪಿ1 ಮತ್ತು 10 ರಲ್ಲಿ ನಮೂದು ಮಾಡಿಲ್ಲ ಸುಳ್ಳು ಎಂದರೆ ಸರಿಯಲ್ಲ. ಆ ದಿನ ಪಶ್ಚಿಮದಿಂದ ಪೂರ್ವಕ್ಕೆ ಆರೋಪಿಯು ಹೋಗುತ್ತಿದ್ದನು. ಆ ಸಮಯದಲ್ಲಿ ನಾವು ಸ್ಥಳದಲ್ಲಿ ನಿಂತು ಗಸ್ತು ಮಾಡುತ್ತಿದ್ದೆವು. ಸದರಿ ಮೇಲೆ ಹೇಳಿದ ಕ್ಯಾಸಂಬಹಳ್ಳಿ ಶಾಂತಿಪುರ ರಸ್ತೆಯು ಜನಸಂದಣಿ ಪ್ರದೇಶ ಮತ್ತು ವಾಹನಗಳು ತುಂಬಾ ಹೋಗುವ ರಸ್ತೆ ಎಂದರೆ ಸರಿಯಲ್ಲ. ಚೀಲ ಮತ್ತು ಮೂಟೆ ಒಂದೇ ಎಂದರೆ ಸಾಕ್ಷಿಯು ಇಲ್ಲ ಚೀಲದಲ್ಲಿ ವಸ್ತುವನ್ನು ಹಾಕಿ ಕಟ್ಟಿದರೆ ಅದು ಮೂಟೆ ಎನ್ನುತ್ತಾರೆ. ಸದರಿ ನೀಲಿ ಬಣ್ಣದ ಮೂಟೆಯನ್ನುನಾವು ಆ ದಿನ ಆರೋಪಿ ಇಂದ ಅಮಾನತುಪಡಿಸಿಕೊಂಡಿರುತ್ತೇವೆ. ಸದರಿ ನೀಲಿ ಬಣ್ಣದ ಮೂಟೆಯನ್ನು ಸಹ ನಾನು ನನ್ನ ಮೇಲಾಧಿಕಾರಿಯಾದ ಚಾಸಾ7 ರವರಿಗೆ ಹಸ್ತಾಂತರಿಸಿರುತ್ತೇನೆ.

9. ಎಂಒ 1 ಚೀಟಿಯಲ್ಲಿ ಬರಿ 2 ವ್ಯಕ್ತಿಗಳ ಸಹಿ ಇದ್ದು ಉಳಿದವರ ಸಹಿ ಇಲ್ಲ ಎಂದರೆ ಸರಿ. ಸದರಿ ಎಂ ಒ 1 ರಲ್ಲಿ ಪಂಚರ ಮತ್ತು ಸಿಬ್ಬಂದಿಯ ಸಹಿಯನ್ನು ಪಡೆದಿದ್ದು ಸ್ಥಳದ ಪರಿಮಿತಿ ಇರುವ ಕಾರಣ ಉಳಿದವರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಗೆ ಎಂ ಒ 1 ರ ಚೀಟಿಯನ್ನು ತೋರಿಸಲಾಗಿ ಅಲ್ಲಿ ಉಳಿದವರ ಸಹಿಗಳಿಗೆ ಸ್ಥಳಾವಕಾಶ ಇದೆ ಎಂದರೆ ಸಾಕ್ಷಿಯು ಮುಂದೆ ಸೀಲು ಹಾಕವಾಗ ಸ್ಥಳ ಇರಲಿಕ್ಕಿಲ್ಲ ಎಂದು ತಿಳಿದು ಸಹಿ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ಸದರಿ ಮೇಲೆ ಹೇಳಿದ ವಿಚಾರವನ್ನು ನಿಪಿ1 ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ. ನಮ್ಮ ಇಲಾಖಾ ವಾಹನದಲ್ಲಿ ಯಾವತ್ತೂ ಸಹ ಗಸ್ತುವಿಗೆ ಹೋಗುವಾಗ ದಾಖಲೆಗಳು, ಸೀಲುಗಳು, ದಾರಗಳು, ಬಿಳಿ ಬಟ್ಟೆಗಳು ಇರುತ್ತದೆ. ನಿಪಿ1 ನ್ನು ಮಾಡುವ ಸಂದರ್ಬದಲ್ಲಿ ಯಾವುದೇ ಸಾರ್ವಜನಿಕರು ಅಲ್ಲಿ ಹಾಜರು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ದ್ವಿಚಕ್ರ ವಾಹನಕ್ಕೆ ಸಂಬಂದ ಪಟ್ಟಂತೆ ನಾನು ಮುಂದುವರೆದ ತನಿಖೆಯನ್ನು ನನ್ನ ತನಿಖಾವದಿಯಲ್ಲಿ ಮಾಡಿರುವುದಿಲ್ಲ.

10. ನಂತರ ನಾವು ಸಂಜೆ 7.30 ಕ್ಕೆ ಠಾಣೆಗೆ ಹಿಂತಿರುಗಿರುತ್ತೇವೆ. ಆಗ ಠಾಣಾದಿಕಾರಿಯಾಗಿ ಒಬ್ಬ ಸಿಬ್ಬಂದಿ ಇದ್ದು ಅವರ ಹೆಸರು ನೆನಪಿಲ್ಲ. ನನ್ನ ಪ್ರಕಾರ ನಾವು ಠಾಣೆಗೆ ಹಿಂತಿರುಗಿದ ನಂತರ

ನನ್ನ ಸ್ವಯಂ ದೂರನ್ನು ನನ್ನ ಸಿಬ್ಬಂದಿ ಆದ ಠಾಣಾದಿಕಾರಿಗೆ ಕೊಟ್ಟು ಆತನ ಮೂಲಕ ಪ್ರಥಮ ವರ್ತಮಾನ ವರದಿ ಹಾಕಿಸಿಕೊಳ್ಳಲು ನನಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಮ್ಮಲ್ಲಿ ಸಿಬ್ಬಂದಿ ಕೊರತೆ ಇರುವ ಕಾರಣ ನಾನೇ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಸಿಬ್ಬಂದಿ ಕೊರತೆಯ ವಿಚಾರವನ್ನು ನಾನು ಎಲ್ಲಿಯು ಯಾವ ದಾಖಲೆಯಲ್ಲೂ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಆ ದಿನ ಆರೋಪಿಯು ಯಾವುದೇ ದ್ವಿಚಕ್ರ ವಾಹನದಲ್ಲಿ ಸದರಿ ಸ್ಥಳಕ್ಕೆ ಬಂದಿಲ್ಲ ಮತ್ತು ಆತನ ಬಳಿ ನೀಲಿ ಬಣ್ಣ ದ ಮೂಟೆ/ಚೀಲ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಹಾಗೂ ಆರೋಪಿಗೂ ಮದ್ಯಗಳಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಕ್ಯಾಸಂಬಹಳ್ಳಿ ರಸ್ತೆಯಲ್ಲಿ ಹೋಗುತ್ತಿರುವಾಗ ನಾವಾಗಿಯೇ ಆತನನ್ನು ತಡೆದು ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಆತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ನ್ನು ನಮ್ಮ ಕಛೇರಿಯಲ್ಲಿ ಯೇ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನಾವು ವಶಪಡಿಸಿಕೊಂಡಿದ್ದೇವೆ ಎಂದು ಹೇಳಲಾದ ಎಂಒ 1 ಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಎಂ ಒ 1 ಚೀಟಿಯಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ**).

**ಓದಿ ಹೇಳಿ ಕೇಳಿ ಸರಿ ಇದೆ**

**ಪ್ರದಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್**.